ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ. PW-1

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿನಾಂಕ 02.08.2025

ಮುಂದುವರೆದ ಮುಖ್ಯ ವಿಚಾರಣೆ ಃ ವಾದಿ ಪರ ವಕೀಲರಿಂದ

ಈ ದಾವೆಗೆ ಸಂಬಂಧಿಸಿದಂತೆ ಸಾಕ್ಷಿಯು ಕೆಲವು ದಾಖಲೆಗಳನ್ನು ಈಗಾಗಲೇ ಹಾಜರುಪಡಿಸಿದ್ದು ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

| | |
|---|---|
| ನಿಪಿಃ 7 | ನಮೂನೆ-9 ರ ದೃಢೀಕೃತ ನಕಲು ಪ್ರತಿ |
| ನಿಪಿಃ 8 | ನಮೂನೆ - 11 ಎ ನೇ ದರ ದೃಢೀಕೃತ ನಕಲು ಪ್ರತಿ |
| ನಿಪಿಃ 9 | ಡಿಮ್ಯಾಂಡ್ ರಿಜಿಸ್ಟರ್ |

ಆದ್ದರಿಂದ ವಾದ ಪತ್ರದಲ್ಲಿ ತಿಳಿಸಿರುವಂತೆ ದಾವೆಯನ್ನು ಡಿಕ್ರಿ ಮಾಡಬೇಕಾಗಿ ವಿನಂತಿ ಇರುತ್ತದೆ.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಾನು SSLC ವರೆಗೂ ಓದಿದ್ದು, SSLC ಯಲ್ಲಿ ಅನುತ್ತೀರ್ಣನಾಗಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಸ್ವಲ್ಪ ಮಾತ್ರ ಬರುತ್ತದೆ. ಈ ದಾವೆಯ ಬಗ್ಗೆ ನನಗೆ ಖುದ್ದಾಗಿ ಮಾಹಿತಿ ಇರುತ್ತದೆ. ಈ ದಾವೆಯನ್ನು ಯಾವ ಕಾರಣಕ್ಕಾಗಿ ಸಲ್ಲಿಸಿರುತ್ತೇನೆ ಎಂದು ಗೊತ್ತಿರುತ್ತದೆ. ದಾವಾ ಸ್ವತ್ತು ನಮ್ಮ ಹೆಸರಿಗೆ ನೊಂದಣಿಯಾಗಿದ್ದು, ಅದರ ಖಾತೆಯನ್ನು ಮಾಡಿಸುತ್ತೇನೆಂದು ನನ್ನ ಅಣ್ಣನಾದ ಸಿದ್ದಲಿಂಗೇಗೌಡರು ಖಾಲಿ ಪೇಪರ್ ಗೆ ಸಹಿ ಮಾಡಿಸಿಕೊಂಡು ಅವರ ಹೆಂಡತಿಯ ಹೆಸರಿಗೆ ನೊಂದಣಿ ಮಾಡಿಸಿರುವ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಖಾಲಿ ಪೇಪರ್ ಗೆ ಸಹಿ ಮಾಡಿರುವ ವಿಚಾರ ನಿಮಗೆ ಯಾವಾಗ ತಿಳಿದಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ಅಣ್ಣ ತೀರಿ ಹೋದ ನಂತರ ನನಗೆ ತಿಳಿದಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಅಣ್ಣ 2014-15 ರಲ್ಲಿ ತೀರಿಕೊಂಡಿರುತ್ತಾರೆ.

ನೀವು ಮೊಟ್ಟ ಮೊದಲನೇ ಬಾರಿಗೆ ದಿನಾಂಕ 22.02.2022 ರಂದು ದಾವಾ ಸ್ವತ್ತಿನ ಬಗ್ಗೆ ಪಂಚಾಯಿತಿ ಕಚೇರಿಗೆ ಅರ್ಜಿಯನ್ನು ನೀಡಿರುತ್ತೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಹೌದು

ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು ಸುಮಾರು 15 ವರ್ಷಗಳ ಕಾಲ ನಾನು ಮತ್ತು ನನ್ನ ಅಣ್ಣ ಒಟ್ಟಿಗೆ ವಾಸವಾಗಿದ್ದೆವು ಎಂದು ನುಡಿಯುತ್ತಾರೆ.

ನೀವು ಮತ್ತು ನಿಮ್ಮ ಅಣ್ಣರವರು ಒಟ್ಟಿಗೆ ವಾಸವಾಗಿರುವ ಬಗ್ಗೆ ನಿಮ್ಮ ಬಳಿ ದಾಖಲೆ ಇರುತ್ತದೆಯೇ ಎನ್ನುವ ಪ್ರಶ್ನೆಗೆ ಸಾಕ್ಷಿಯು 4 ಜನರನ್ನು ಕರೆಯಿಸಿ ಸಾಕ್ಷಿ ಹೇಳಿಸುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು 1993 ರಲ್ಲಿ ನನ್ನ ಅಣ್ಣನು ಮೈಸೂರಿಗೆ ವಾಸ ಮಾಡಲು ಹೋಗಿದ್ದು ನಾನು ಮತ್ತು ನನ್ನ ಅಣ್ಣ 1983 ನೇ ಇಸವಿಯಲ್ಲಿ ವಿಭಾಗ ಮಾಡಿಕೊಂಡಿರುತ್ತೇವೆ ಎಂದು ನುಡಿಯುತ್ತಾರೆ.

ನಾನು ನಮ್ಮ ಊರಿನಲ್ಲಿ ವಾಸ ಮಾಡುತ್ತಿದ್ದು 1993 ನೇ ಇಸವಿಯಲಿ ನನ್ನ ಅಣ್ಣನು ಕುಟುಂಬ ಸಮೇತ ವಾಸಕ್ಕೆಂದು ಮೈಸೂರಿಗೆ ಹೋಗಿರುತ್ತಾರೆ ಎಂದರೆ ಹೌದು ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಆಲಿಸಿ ಅನುಮತಿ ನೀಡಲಾಯಿತು)

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.